**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**ಸಿ.ಸಿ. ನಂಃ212/2022 ಡಿ.ಡಬ್ಲ್ಯೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **21.07.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಫೀರ್ಯಾಧಿ ಪರ ಶ್ರೀ ಎಚ್.ಆರ್.ಎಸ್ ವಕೀಲರಿಂದಃ

ನಾನು 10 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ, ನನಗೆ ಕನ್ನಡ ಭಾಷೆ ಓದಲು ಹಾಗೂ ಬರೆಯಲು ಬರುತ್ತದೆ. ನಾನು ದಾಖಲಾತಿಗಳಿಗೆ ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ ಎಂದರೆ ಸರಿ.

ನಿಪಿ-1 ಚೆಕ್ಕು ಮತ್ತು ಅದರಲ್ಲಿರುವ ನಿಪಿ-1 ಎ ಸಹಿ ನನಗೆ ಸೇರಿರುತ್ತದೆ ಎಂದರೆ ಸರಿ. ನಾನು ಮತ್ತು ಫೀರ್ಯಾದಿಯು ಒಂದೇ ಊರಿನವರು ಎಂದರೆ ಸರಿ. ಫೀರ್ಯಾದಿಯು ಇಟ್ಟಿಗೆ ಕಾರ್ಖಾನೆಯನ್ನು ನಡೆಸುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಫೀರ್ಯಾದಿ ಹಾಗೂ ಅವರ ತಂದೆ ಕಾಂಟ್ರಕ್ರಟರ ಕೆಲಸ ಮಾಡುವ ಕಾರಣ ಯಾಲಕ್ಕಿಗೌಡರ ಮಗ ರವಿ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿಯು ಅವರ ತಂದೆ ಕಾಂಟ್ರಕ್ಟ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಫೀರ್ಯಾದಿಯು ಇಟ್ಟಿಗೆ ಕಾರ್ಖಾನೆ ನಡಸುತ್ತಿದ್ದು ಹಾಗೂ ಕಾಂಟ್ರಕ್ಟ ಕೆಲಸ ಮಾಡುತ್ತಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಮನಹಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ಚಾಮನಹಳ್ಳಿ ಗ್ರಾಮದಲ್ಲಿ ನನ್ನ ಮನೆ ಮೈಸೂರು-ಮಳವಳ್ಳಿ ಮುಖ್ಯ ರಸ್ತೆಯಲ್ಲಿ ಇರುತ್ತದೆ ಎಂದರೆ ಸರಿ.

ನಿಂಗಣ್ಣ ಬಿ ರಾಥೋಡರವರು ನನಗೆ 2020 ರಿಂದ ಪರಿಚಯ ಇರುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹಾಗೂ ನಿಡಿ-1 ನೋಟಿಸಿನಲ್ಲಿ ಸದರಿಯವರು ನನಗೆ 2020 ರಿಂದ ಪರಿಚಯ ಇರುತ್ತಾರೆ ಎಂದು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರು ನನಗೆ ಹಲವಾರು ವರ್ಷಗಳಿಂದ ಪರಿಚಯ ಇದ್ದರೂ ಸಹ ಸದರಿಯವರು

ನನಗೆ 2020 ರಿಂದ ಪರಿಚಯ ಇರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ನನ್ನ ಮನೆಯ ಪಕ್ಕದಲ್ಲಿ ಬಾಡಿಗೆಗೆ ಇದ್ದರು. ನನ್ನ ಮನೆಯಿಂದ ಬಿ.ಜಿ.ಎಸ್ ವೃತ್ತ ಸುಮಾರು 1 ಕಿ.ಮೀ ದೂರದಲ್ಲಿ ಇರುತ್ತದೆ. ನಿಂಗಣ್ಣರವರು ಬಿ.ಜಿ.ಎಸ್ ವೃತ್ತದ ಹತ್ತಿರ ವಾಸ ಇದ್ದರು ಎಂದರೆ ಸರಿ. ಸದರಿಯವರ ಕುಟುಂಬದ ಸದಸ್ಯರ ಪರಿಚಯ ನನಗೆ ಇರುತ್ತದೆ. ಸದರಿಯವರು ಹೆಂಡತಿ ಮತ್ತು ಮಗನೊಂದಿಗೆ ವಾಸ ಮಾಡುತ್ತಾರೆ. ಸದರಿಯವರ ಹೆಂಡತಿ ಬನ್ನೂರು ಪಟ್ಟಣದ ಬಿ.ಸೀಹಳ್ಳಿ ಗ್ರಾಮದಲ್ಲಿ ವಾಸ ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿಯವರ ಮದುವೆ ವಿಚಾರ ನನಗೆ ಗೊತ್ತಿರುವುದಿಲ್ಲ.

ನಿಂಗಣ್ಣರವರ ಜಿಸಿಬಿ ವಾಹನದ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಫಿರ್ಯಾದಿಯು ನಿಂಗಣ್ಣರವರಿಗೆ ಸೇರಿದ ಜೆಸಿಬಿ ವಾಹನವನ್ನು ತೆಂಗಿನ ತೋಟದ ಕೆಲಸಕ್ಕೆ ಕರೆಸಿರುತ್ತಾರೆ. ಸದರಿಯವರು ತೆಂಗಿನ ತೋಟದಲ್ಲಿ ಯಾವ ಕೆಲಸಕ್ಕೆ ಕರೆಸಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಸದರಿ ಸಂಗತಿಯನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹಾಗೂ ನಿಡಿ-1 ನೋಟಿಸಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಂಗಣ್ಣರವರು ಫಿರ್ಯಾದಿಯಿಂದ ದಿನಾಂಕ 10.06.2021 ರಂದು ರೂ.3 ಲಕ್ಷ ಹಣವನ್ನು ಮುಂಗಡ ಹಣವಾಗಿ ಪಡೆದುಕೊಂಡಿರುತ್ತಾರೆ. ಸದರಿ ದಿನ ನಾನು ಹಾಜರು ಇದ್ದೆನು. ಸದರಿ ಹಣವನ್ನು ಮನೆ ಬಾಡಿಗೆಗೆ ಮುಂಗಡ ಹಣವನ್ನು ಕೊಡುವ ಸಲುವಾಗಿ ಪಡೆದುಕೊಂಡಿರುತ್ತಾರೆ. ಸದರಿಯವರು ಸದರಿ ಹಣವನ್ನು ಬಾಡಿಗೆಗೆ ಮುಂಗಡ ಹಣ ನೀಡಿರುತ್ತಾರೆಯೇ ಅಥವಾ ಬೇರೆ ಕೆಲಸಕ್ಕೆ ಉಪಯೋಗಿಸಿರುತ್ತಾರೆಯೇ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಹಣವನ್ನು ಯಾವ ಉಪಯೋಗಕ್ಕೆ ನಿಂಗಣ್ಣರವರನ್ನು ಪ್ರಶ್ನೆ ಮಾಡಿರುವುದಿಲ್ಲ. ಅದನ್ನು ಪ್ರಶ್ನೆ ಮಾಡಲು ನನಗೆ ತೊಂದರೆ ಇರಲಿಲ್ಲ. ಹಣ ಪಡೆದುಕೊಳ್ಳುವ ಸಮಯದಲ್ಲಿ ಯಾವುದೇ ದಾಖಲೆಯನ್ನು ಮಾಡಿಕೊಟ್ಟಿರುವುದಿಲ್ಲ. ಹಣ ನೀಡುವ ಸಮಯದಲ್ಲಿ ಫಿರ್ಯಾದಿಯು ದಾಖಲೆಯನ್ನು ಕೇಳಿರುವುದಿಲ್ಲ.

ನಿಂಗಣ್ಣರವರು ದಿ.**10.06.2021** ರಂದು ಬಾಡಿಗೆ ಮನೆಗೆ ಮುಂಗಡ ಹಣವನ್ನು ನೀಡುವ ಸಲುವಾಗಿ ರೂ.**3** ಲಕ್ಷ ಹಣವನ್ನು ಫೀರ್ಯಾದಿದಾರರಿಂದ ಪಡೆದಕೊಂಡಿರುತ್ತಾರೆ ಎಂದು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಿಂಗಣ್ಣರವರು ಫೀರ್ಯಾದಿಯ ತೆಂಗಿನ ತೋಟದಲ್ಲಿ **3** ತಿಂಗಳ ಕಾಲ ಕೆಲಸ ಮಾಡಿರುತ್ತಾರೆ. **3** ತಿಂಗಳ ನಂತರ ಸದರಿಯವರ ನಡುವೆ ಮನಸ್ತಾಪ ಆಗಿರುತ್ತದೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸುಮಾರು **8** ದಿನಗಳ ನಂತರ ಫೀರ್ಯಾದಿ ಮತ್ತು ನಿಂಗಣ್ಣರವರ ನಡುವೆ ಮನಸ್ತಾಪ ಆಗಿರುತ್ತದೆ ಎಂದು ನುಡಿದಿರುತ್ತೇನೆ ಎಂದರೆ ಸರಿ. ಫೀರ್ಯಾದಿಯು ಜೆಸಿಬಿ ಕೆಲಸ ಮಾಡಿಸಿಕೊಂಡ ಬಾಬ್ತು ಎಷ್ಟು ಹಣ ನೀಡಬೇಕಾಗಿರುತ್ತದೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಎಷ್ಟು ಹಣ ನೀಡಬೇಕಾಗಿರುತ್ತದೆ ಎನ್ನುವ ಬಾಬ್ತು ನಾನು ನಿಂಗಣ್ಣರವರನ್ನು ಕೇಳಿರುವುದಿಲ್ಲ. ನಾನು ನಿರ್ದಿಷ್ಟವಾಗಿ ಎಷ್ಟು ಹಣವನ್ನು ಕಟಾವು ಮಾಡಿಕೊಳ್ಳಬೇಕೆಂದು ಹೇಳಿರುವುದಿಲ್ಲ. ಫೀರ್ಯಾದಿಯು ನಿಂಗಣ್ಣರವರಿಂದ ತಮ್ಮ ತೆಂಗಿನ ತೋಟದಲ್ಲಿ ಜಿಸಿಬಿ ಕೆಲಸ ಮಾಡಿರುವ ವಿಚಾರ, ಅದರ ಬಾಬ್ತು ಹಣ ಪಾವತಿ ಮಾಡಲು ಬಾಕಿ ಇರುತ್ತದೆ, ಸದರಿ ಬಾಕಿ ಹಣವನ್ನು ನಿಂಗಣ್ಣ ಪಡೆದುಕೊಂಡ ಮುಂಗಡ ಹಣದಿಂದ ಕಟಾವು ಮಾಡಿಕೊಳ್ಳಲು ಹೇಳಿದ್ದೆ ಹಾಗೂ ಸದರಿ ವಿಚಾರಕ್ಕೆ ಫೀರ್ಯಾದಿಯು ಒಪ್ಪಿರುವುದಿಲ್ಲ ಎನ್ನುವ ವಿಚಾರ ಸುಳ್ಳು ಆಗಿರುತ್ತದೆ ಎಂದರೆ ಸರಿಯಲ್ಲ.

ಫೀರ್ಯಾದಿಯು ನಿಂಗಣ್ಣರವರು ಪಡೆದುಕೊಂಡ ಮುಂಗಡ ಹಣವನ್ನು ವಾಪಸ ನೀಡಲು ದಿ.**23.10.2022** ರಲ್ಲಿ ಕೇಳಿರುತ್ತಾರೆ. ಸದರಿ ವಿಚಾರವನ್ನು ನನಗೆ ನಿಂಗಣ್ಣ ತಿಳಿಸಿರುತ್ತಾರೆ. ಅದೇ ದಿನ ಬನ್ನೂರು ಪೊಲೀಸ ಠಾಣೆಯಲ್ಲಿ ದೂರು ನೀಡಲಾಗಿರುತ್ತದೆ. ದೂರನ್ನು ನಿಂಗಣ್ಣ ಮತ್ತು ಅವರ ಅತ್ತೆ ಬಸಮ್ಮಣಿರವರು ನೀಡಿರುತ್ತಾರೆ. ಸದರಿ ವಿಚಾರವನ್ನು ನನಗೆ ನಿಂಗಣ್ಣ ತಿಳಿಸಿರುತ್ತಾರೆ.

ನಾನು ಪೊಲೀಸ ಠಾಣೆಗೆ ಹೋಗಿರುತ್ತೇನೆ. ನಾನು ಸುಮಾರು ಬಾರಿ ಪೊಲೀಸ ಠಾಣೆಗೆ ಹೋಗಿರುತ್ತೇನೆ. ನಾನು ದಿ. **23.10.2022, 15.11.2022** ಮತ್ತು

25.11.2022 ರಂದು ಬನ್ನೂರು ಪೊಲೀಸ ಠಾಣೆಗೆ ಹೋಗಿರುತ್ತೇನೆ. ನಿಂಗಣ್ಣ ಮತ್ತು ಬಸಮ್ಮಣಿರವರು ಫೀರ್ಯಾದಿಯ ವಿರುದ್ಧ ಬನ್ನೂರು ಪೊಲೀಸ ಠಾಣೆಯಲ್ಲಿ ದೂರು ನೀಡಿರುವ ವಿಚಾರ ಹಾಗೂ ನಾನು 3 ಬಾರಿ ಬನ್ನೂರು ಪೊಲೀಸ ಠಾಣೆಗೆ ಹೋಗಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಿಂಗಣ್ಣರವರು ಫೀರ್ಯಾದಿಗೆ ಹಣ ನೀಡುವ ಸಲುವಾಗಿ ನನಗೆ ಹಣ ಕೇಳಿರುವುದಿಲ್ಲ. ಫೀರ್ಯಾದಿಯು ನಿಂಗಣ್ಣರವರಿಗೆ ದಿ.23.10.2022 ರಂದು ಹಣ ಕೇಳಿರುತ್ತಾರೆ. ಸದರಿ ವಿಚಾರ ನನಗೆ ನಿಂಗಣ್ಣರವರಿಂದ ತಿಳಿದಿರುತ್ತದೆ. ಫೀರ್ಯಾದಿಯು ಹಣ ಕೇಳಿದ ದಿನದಂದೇ ನಿಂಗಣ್ಣರವರು ಬೆಳಿಗ್ಗೆ 9.30 ಗಂಟೆಗೆ ನನಗೆ ತಿಳಿಸಿರುತ್ತಾರೆ. ಸದರಿಯವರಿಗೆ ರವಿರವರು ಎಷ್ಟು ಗಂಟೆಗೆ ಹಣ ಕೇಳಿರುತ್ತಾರೆ ಎನ್ನುವ ವಿಚಾರವನ್ನು ನಾನು ನಿಂಗಣ್ಣರವರಿಗೆ ಕೇಳಿದ್ದು, ಸದರಿಯವರು 9.30 ಗಂಟೆಗೆ ಕೇಳಿರುತ್ತಾರೆ ಎಂದು ಹೇಳಿರುತ್ತಾರೆ. ಆ ಸಮಯದಲ್ಲಿ ನಾನು ನನ್ನ ತೋಟದಲ್ಲಿ ಇದ್ದೆನು. ನಾನು ಹಾಗೂ ನಿಂಗಣ್ಣ ಅಕ್ಕಪಕ್ಕದ ತೋಟದಲ್ಲಿ ಇದ್ದೆನು. ಸದರಿಯವರು ಸುಮಾರು 30 ಅಡಿ ದೂರದಲ್ಲಿ ಇದ್ದರು. ಸದರಿಯವರಿಗೆ ನನಗೆ ದೂರವಾಣಿ ಮುಖಾಂತರ ತಿಳಿಸಿರುತ್ತಾರೆ. ನಾನು ನಿಂಗಣ್ಣರವರಿಗೆ ಹಣವನ್ನು ಪಾವತಿ ಮಾಡಿ ನಿನ್ನ ಜಿಸಿಬಿ ವಾಹನವನ್ನು ಬಿಡಿಸಿಕೊಂಡ ಬಾ ಎಂದು ಹೇಳಿರುತ್ತೇನೆ. ಸದರಿ ದಿನ ನಾನು ರವಿರವರೊಂದಿಗೆ ಯಾವುದೇ ವಿಚಾರ ಮಾತನಾಡಿರುವುದಿಲ್ಲ. ಈ ಬಗ್ಗೆ ನಾನು ಫೀರ್ಯಾದಿಯೊಂದಿಗೆ ದಿನಾಂಕ 23.10.2022 ರಂದು ನಾನು ಪೊಲೀಸ ಠಾಣೆಯಲ್ಲಿ ಮಾತನಾಡಿರುತ್ತೇನೆ. ಪೊಲೀಸ ಠಾಣೆಯಲ್ಲಿ ಪೊಲೀಸರು, ಫೀರ್ಯಾದಿದಾರರು ಹಾಗೂ ನಿಂಗಣ್ಣರವರು ಮಾತನಾಡಿರುತ್ತಾರೆ. ನಾನು ಪೊಲೀಸ ಠಾಣೆಗೆ ಸಂಜೆ 5 ಗಂಟೆಗೆ ಹೋಗಿರುತ್ತೇನೆ. ನಾನು, ನಿಂಗಣ್ಣ ಹಾಗೂ ಬಸಮ್ಮಣಿ ಒಟ್ಟಿಗೆ ಹೋಗಿರುತ್ತೇವೆ. ಸದರಿ ದಿನ ನಿಂಗಣ್ಣರವರು ದೂರು ಕೊಟ್ಟಿರುತ್ತಾರೆ. ನಾನು ಫೀರ್ಯಾದಿಗೆ 2-3 ದಿನ ಸಮಯ ಕೊಡಲು ದಿನಾಂಕ 05.07.2022 ರಂದು ಕೇಳಿರುತ್ತೇನೆ, ಸಾಕ್ಷಿ ಮುಂದುವರಿದು ನಾನು ಫೀರ್ಯಾದಿಗೆ 3 ತಿಂಗಳ ಸಮಯ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹಾಗೂ ನಿಡಿ-1

ನೋಟಿಸಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ನಿಂಗಣ್ಣ ಹಾಗೂ ಬಸಮ್ಮಣಿರವರು ಠಾಣೆಗೆ ಹೋಗಿರುವ ವಿಚಾರ, ಅದೇ ದಿನ ಬೆಳಿಗ್ಗೆ **9.30** ಗಂಟೆ ಸಮಯದಲ್ಲಿ ಫಿರ್ಯಾದಿಯು ನಿಂಗಣ್ಣರವರಿಗೆ ಹಣ ಕೇಳಿರುವ ವಿಚಾರ ಹಾಗೂ ನಿಂಗಣ್ಣರವರು ನನಗೆ ತಿಳಿಸಿರುವ ವಿಚಾರ ಎಲ್ಲವೂ ಸುಳ್ಳು ಎಂದರೆ ಸರಿಯಲ್ಲ. ಫಿರ್ಯಾದಿಯು ನಿಂಗಣ್ಣರವರಿಂದ ಚೆಕ್ಕನ್ನು ಕೊಡಿಸಿ ಕೊಡಲು ದಿ.**05.07.2022** ರಂದು ತಿಳಿಸಿರುತ್ತಾರೆ. ಅದೇ ದಿನ ಫಿರ್ಯಾದಿಯು ನಿಂಗಣ್ಣರವರಿಗೆ ಸೇರಿದ ಯಾದಗಿರಿ ಜಿಲ್ಲೆಗೆ ಸಂಬಂಧಿಸಿದ ಚೆಕ್ಕನ್ನು ಪಡೆಯುತ್ತಿರುವುದಿಲ್ಲ ಎಂದು ನಿಂಗಣ್ಣ ನನಗೆ ತಿಳಿಸಿರುತ್ತಾರೆ. ನಾನು ಹಾಗೂ ನಿಂಗಣ್ಣ ಸಾಮಾನ್ಯವಾಗಿ ಯಾವಾಗಲೂ ಜೊತೆಯಲ್ಲಿಯೇ ಇರುತ್ತೇವೆ ಎಂದರೆ ಸರಿ. ದಿನಾಂಕ **05.07.2022** ರಂದು ಸಹ ನಾವು ಜೊತೆಯಲ್ಲಿ ಇದ್ದೆವು ಎಂದರೆ ಸರಿ. ಸದರಿ ದಿನ ನಾವು ಒಟ್ಟಿಗೆ ಇದ್ದೆವು ಎನ್ನುವ ವಿಚಾರ, ನಿಂಗಣ್ಣರವರಿಂದ ಚೆಕ್ಕನ್ನು ಕೊಡಿಸಿ ಕೊಡಲು ಫಿರ್ಯಾದಿಯು ಹೇಳಿರುತ್ತಾರೆ ಎನ್ನುವ ವಿಚಾರ ಹಾಗೂ ಫಿರ್ಯಾದಿಯು ನಿಂಗಣ್ಣರವರಿಗೆ ಸೇರಿದ ಯಾದಗಿರಿ ಜಿಲ್ಲೆಯ ಚೆಕ್ಕನ್ನು ಪಡೆಯುತ್ತಿರುವುದಿಲ್ಲ ಎನ್ನುವ ವಿಚಾರ ಹಾಗೂ ಅದನ್ನು ನಿಂಗಣ್ಣ ನನಗೆ ತಿಳಿಸಿರುತ್ತಾರೆ ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ನಿಂಗಣ್ಣರವರ ಚೆಕ್ಕಿನ ವಿಚಾರವಾಗಿ ನಾನು ಫಿರ್ಯಾದಿಯನ್ನು ದಿ.**06.07.2022** ರಂದು ಭೇಟಿ ಮಾಡಿರುತ್ತೇನೆ. ಸದರಿ ದಿನ ಫಿರ್ಯಾದಿಯು ಬೇರೆಯವರ ಚೆಕ್ಕನ್ನು ಕೊಡಿ ಎಂದು ನನಗೆ ತಿಳಿಸಿರುತ್ತಾರೆ. ನಾನು ಸದರಿಯವರಿಗೆ ನನಗೆ ಸೇರಿದ ಚೆಕ್ಕನ್ನು ಹಾಗೂ ನಿಂಗಣ್ಣರವರಿಗೆ ಸೇರಿದ ಚೆಕ್ಕನ್ನು ನೀಡಿರುತ್ತೇನೆ. ನಾನು ಚೆಕ್ಕುಗಳನ್ನು ಅದೇ ದಿನ ನೀಡಿರುತ್ತೇನೆ. ನಾನು ಸದರಿ ದಿನ ಫಿರ್ಯಾದಿಯನ್ನು ಭೇಟಿ ಮಾಡಿರುವುದಿಲ್ಲ ಹಾಗೂ ನನಗೆ ಮತ್ತು ನಿಂಗಣ್ಣರವರಿಗೆ ಸೇರಿದ ಚೆಕ್ಕುಗಳನ್ನು ಫಿರ್ಯಾದಿಯವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಂಗಣ್ಣರವರು ಫಿರ್ಯಾದಿಯ ಹತ್ತಿರ ಸುಮಾರು **3** ತಿಂಗಳ ಕಾಲ ಕೆಲಸ ಮಾಡಿರುತ್ತಾರೆ. ಮನಸ್ತಾಪ ಆದ ನಂತರ ಸಹ ನಿಂಗಣ್ಣರವರು ಫಿರ್ಯಾದಿಯ ಬಳಿ

ಕೆಲಸಕ್ಕೆ ಹೋಗಿರುತ್ತಾರೆ. ಫಿರ್ಯಾದಿಯು ನಿಂಗಣ್ಣರವರಿಂದ ಕೆಲಸ ಮಾಡಿಸಿಕೊಂಡು ಹಣ ನೀಡಿದ ಬಾಬ್ತು ನಿಂಗಣ್ಣರವರು ಸದರಿಯವರ ವಿರುದ್ಧ ದೂರು ನೀಡಿರುವುದಿಲ್ಲ. ಸದರಿಯವರು ಹಿಂದೆ ಮಾಡಿದ ಕೆಲಸಕ್ಕೆ ಹಣ ನೀಡದಿದ್ದರೂ ಪುನಃ ಅವರ ಬಳಿ ಕೆಲಸಕ್ಕೆ ಹೋಗಿರುತ್ತಾರೆ ಎಂದರೆ ಸರಿ. 2 ನೇ ಬಾರಿ ಫಿರ್ಯಾದಿಯ ಬಳಿ ಕೆಲಸಕ್ಕೆ ಒಂದೇದಿನ ಮಾತ್ರ ಹೋಗಿರುತ್ತಾರೆ, ಸಾಕ್ಷಿ ಮುಂದುವರಿದು ಅದೇ ದಿನ ಫಿರ್ಯಾದಿಯು ನಿಂಗಣ್ಣರವರಿಗೆ ಸಂಬಂಧಿಸಿದ ಜೆಸಿಬಿಯನ್ನು ವಶಕ್ಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಜೆಸಿಬಿ ವಶಕ್ಕೆ ಪಡೆಯುವ ಸಮಯದಲ್ಲಿ ನಾನು ಸ್ಥಳದಲ್ಲಿಯೇ ಇದ್ದೆನು, ಸಾಕ್ಷಿ ಮುಂದುವರಿದು ಅದರ ಬಾಬ್ತು ನನ್ನ ಬಳಿ ವಿಡಿಯೋ ದೃಶ್ಯಾವಳಿ ಇರುತ್ತದೆ ಎಂದು ನುಡಿಯುತ್ತಾರೆ. ವಿಡಿಯೋ ಚಿತ್ರೀಕರಣವನ್ನು ನಿಂಗಣ್ಣರವರ ಜೆಸಿಬಿ ಆಪರೇಟರ್ ಮಾಡಿರುತ್ತಾರೆ. ಸದರಿಯವರ ಹೆಸರು ಹಾಗೂ ವಿವರಗಳು ನನಗೆ ಗೊತ್ತಿರುವುದಿಲ್ಲ. ವಿಡಿಯೋ ಚಿತ್ರೀಕರಣ ಮಾಡಿರುವ ವಿಚಾರವನ್ನು ಜೆಸಿಬಿ ಆಪರೇಟರ ನನಗೆ ತಿಳಿಸಿರುತ್ತಾರೆ. ವಿಡಿಯೋ ಚಿತ್ರೀಕರಣ ಮಾಡಿರುವ ವಿಚಾರವನ್ನು ತಿಳಿಸಿದ ನಂತರ ಅವರ ಬಗ್ಗೆ ವಿವರಗಳನ್ನು ಕೇಳಿರುವುದಿಲ್ಲ. ಫಿರ್ಯಾದಿಯು ಜೆಸಿಬಿಯನ್ನು ವಶಕ್ಕೆ ಪಡೆದ್ದರು ಎನ್ನಲಾದ ಸಮಯದಲ್ಲಿ ವಿಡಿಯೋ ಚಿತ್ರೀಕರಣ ಮಾಡುತ್ತಿದ್ದ ಸಮಯದಲ್ಲಿ ನಾನು ಸಿದ್ದರಾಜು, ಬಸಮ್ಮಣಿ, ನಿಂಗಣ್ಣ ಮತ್ತು ಫಿರ್ಯಾದಿಯು ಹಾಜರು ಇದ್ದರು. ವಿಡಿಯೋ ಚಿತ್ರೀಕರಣವನ್ನು ಮೊಬೈಲ ನಲ್ಲಿ ಮಾಡಿರುತ್ತಾರ. ಸದರಿ ಮೊಬೈಲ್ ಜೆಸಿಬಿ ಆಪರೇಟರವರಿಗೆ ಸೇರಿರುತ್ತದೆ. ಸದರಿ ಮೊಬೈಲನ ಬಣ್ಣ ಹಾಗೂ ಕಂಪನಿ ನನಗೆ ಗೊತ್ತಿರುವುದಿಲ್ಲ.ಜಿಸಿಬಿಯನ್ನು ವಶಕ್ಕೆ ಪಡೆದಿರುತ್ತಾರೆ ಎನ್ನಲಾದ ಸಂಗತಿಯು ಮಧ್ಯಾಹ್ನ 3.30 ರಿಂದ 4 ಗಂಟೆಗೆ ಫಿರ್ಯಾದಿಯ ತೋಟದಲ್ಲಿ ನೆಡದಿರುತ್ತದೆ. ಆ ಸಮಯದಲ್ಲಿ ಫಿರ್ಯಾದಿಯು ಮತ್ತು ಅವರ ಆಳು ಸಿದ್ದರಾಜು ಇದ್ದರು. ನಾನು ಫಿರ್ಯಾದಿಯನ್ನು ಪ್ರಶ್ನೆ ಮಾಡಿರುವುದಿಲ್ಲ ಹಾಗೂ ದೂರದಲ್ಲಿ ನಿಂತಿದ್ದೆನು. ಜಪ್ತುಪಡಿಸಿರುತ್ತಾರೆ ಎನ್ನಲಾದ ಜೆಸಿಬಿ ವಾಹನದ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಈ ಖಂಡಿಕೆಯಲ್ಲಿ ತಿಳಿಸಿರುವ ವಿಚಾರಗಳನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹಾಗೂ ನಿಡಿ-1 ನೋಟಿಸಿನಲ್ಲಿ

ತಿಳಿಸಿರುತ್ತೇನೆ. ಸದರಿ ಸಂಗತಿಗಳನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹಾಗೂ ನಿಡಿ-1 ನೋಟಿಸಿನಲ್ಲಿ ತಿಳಿಸಿರುವುದಿಲ್ಲ ಮತ್ತು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮೂರು ಬಾರಿ ಪೊಲೀಸ ಠಾಣೆಗೆ ಹೋದಾಗಲೂ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ಠಾಣೆಯ ಒಳಗೆ ನಿಂಗಣ್ಣ ಮತ್ತು ಬಸಮ್ಮಣಿರವರ ಜೊತೆಯಲ್ಲಿ ಇದ್ದೆನು. ದಿ.23.10.2022 ರಂದು ಪೊಲೀಸರು ಬಸಮ್ಮಣಿ ಮತ್ತು ನಿಂಗಣ್ಣರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಪೊಲೀಸ ಠಾಣೆಯಲ್ಲಿ ಸಂಜೆ 8 ಗಂಟೆವರೆಗೂ ಇದ್ದೆವು. ಸದರಿ ದಿನ ಫಿರ್ಯಾದಿಯು ಸಹ ಠಾಣೆಗೆ ಬಂದಿರುತ್ತಾರೆ. ದೂರಿಗೆ ಸಂಬಂಧಿಸಿದಂತೆ ಪೊಲೀಸರು ಫಿರ್ಯಾದಿಯಿಂದ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಈ ಖಂಡಿಕೆಯಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ರೂ.3,55,000/- ಹಣವನ್ನು ಫಿರ್ಯಾದಿಗೆ ನೀಡುವಂತೆ ನಾರಾಯಣಿರವರು ನಿಂಗಣ್ಣರವರಿಗೆ ತಿಳಿಸಿರುತ್ತಾರೆ. ಸದರಿ ದಿನ ಹಣ ನೀಡಿರುವುದಿಲ್ಲ, ಆದರೆ ತೀರ್ಮಾನ ಮಾಡಿರುತ್ತಾರೆ. ತೀರ್ಮಾನದಲ್ಲಿ ದಿನಾಂಕ 15.11.2022 ರಂದು ರೂ.2,05,000/- ಮತ್ತು ದಿನಾಂಕ 25.11.2022 ರೂ.1,50,000/- ಹಣವನ್ನು ಕೊಡುವಂತೆ ಪೊಲೀಸರು ನಿಂಗಣ್ಣರವರಿಗೆ ತಿಳಿಸಿರುತ್ತಾರೆ, ಸಾಕ್ಷಿ ಮುಂದುವರಿದು ಬಸಮ್ಮಣಿರವರು ಚೆಕ್ಕು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಿನ ತೀರ್ಮಾನವಾದ ನಂತರ ನಿಂಗಣ್ಣರವರು ನೀಡಿದ ದೂರನ್ನು ಹೇಳಿಕೆಗಳನ್ನು ಪಡೆದುಕೊಂಡು ಮುಕ್ತಾಯ ಮಾಡಿರುತ್ತೇವೆ ಎಂದು ಪೊಲೀಸರು ತಿಳಿಸಿರುವುದಿಲ್ಲ. ಸದರಿ ದೂರಿನ ಬಾಬ್ತು ಪೊಲೀಸರು ಪುನಃ ನನ್ನನ್ನು ಠಾಣೆಗೆ ಕರೆದಿರುತ್ತಾರೆ, ಸಾಕ್ಷಿ ಮುಂದುವರಿದು ನನ್ನನ್ನು ಪೊಲೀಸ ಠಾಣೆಗೆ ಕರೆದಿರುವುದಿಲ್ಲ, ಆದರೆ ಬಸಮ್ಮಣಿ ಮತ್ತು ನಿಂಗಣ್ಣರವರು ದಿ.15.11.2022 ರಂದು ಪೊಲೀಸ ಠಾಣೆಗೆ ಹೋಗಿರುತ್ತಾರೆ ಮತ್ತು ಸದರಿ ದಿನ ನಾನು ಪೊಲೀಸ ಠಾಣೆಗೆ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ.

ಸದರಿಯವರಿಬ್ಬರೂ ಪೊಲೀಸ ಠಾಣೆಗೆ ಹೋದ ವಿಚಾರ ನನಗೆ ದಿ.25.11.2022 ರಂದು ತಿಳಿದಿರುತ್ತದೆ. ಸದರಿ ವಿಚಾರವನ್ನು ಬಸಮ್ಮಣಿ ಮತ್ತು ನಿಂಗಣ್ಣರವರು ನನಗೆ ತಿಳಿಸಿರುತ್ತಾರೆ. ಸದರಿ ದಿನ ನಾನು ಪೊಲೀಸ ಠಾಣೆಗೆ ಹೋಗಿರುತ್ತೇನೆ. ಸದರಿ ದಿನ ನಾನು, ನಿಂಗಣ್ಣ ಮತ್ತು ಬಸಮ್ಮಣಿ ಪೊಲೀಸ ಠಾಣೆಗೆ ಹೋಗಿರುತ್ತೇವೆ. ಸದರಿ ದಿನ ಪೊಲೀಸರು ನನ್ನ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ದಿನ ಫೀರ್ಯಾದಿಯು ಠಾಣೆಗೆ ಬಂದಿರುವುದಿಲ್ಲ. ಈ ಖಂಡಿಕೆಯಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಫೀರ್ಯಾದಿಯು ನನ್ನಿಂದ ಪಡೆದುಕೊಂಡು ಚೆಕ್ಕನ್ನು ಹಿಂದಿರುಗಿಸುವಂತೆ ನಾನು ಅವರಿಗೆ ಕೇಳಿರುವುದಿಲ್ಲ. ಫೀರ್ಯಾದಿಯು ನಾನು ನೀಡಿದ 2 ಚೆಕ್ಕುಗಳ ಪೈಕಿ 1 ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ ಎನ್ನುವ ವಿಚಾರ ನನಗೆ ಅವರು ಕಳುಹಿಸಿದ ನೋಟಿಸಿನಿಂದ ನನಗೆ ತಿಳಿದಿರುತ್ತದೆ. ಸದರಿ ವಿಚಾರದ ಬಾಬ್ತು ಪೊಲೀಸ ಠಾಣೆಯಲ್ಲಿ ಅವರ ವಿರುದ್ಧ ದೂರು ನೀಡಲು ನನಗೆ ತೊಂದರೆ ಇರಲಿಲ್ಲ. ದಿನಾಂಕ 23.10.2022 ರಂದು ನಾನು ಠಾಣೆಗೆ ಹೋಗಿದ್ದೆ ಎನ್ನಲಾದ ದಿನ ಫೀರ್ಯಾದಿಯು ನನ್ನಿಂದ ಸಹ 2 ಚೆಕ್ಕುಗಳನ್ನು ಪಡೆದುಕೊಂಡಿರುತ್ತಾರೆ ಎನ್ನುವ ಬಾಬ್ತು ನಾನು ಪೊಲೀಸರಿಗೆ ತಿಳಿಸಿದ್ದು, ಪೊಲೀಸರು ನನ್ನಿಂದ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಫೀರ್ಯಾದಿಯು 15 ಲಕ್ಷ ಕೊಡಬೇಕೆಂದು ಹಾಗೂ 20 ಲಕ್ಷ ಕೊಡಬೇಕೆಂದು ದಿ.23.10.2022 ರಂದು ಅವರ ತೋಟದಲ್ಲಿ ಕೇಳಿರುತ್ತಾರೆ. ಆ ಸಮಯದಲ್ಲಿ ನಿಂಗಣ್ಣ ಮತ್ತು ಬಸಮ್ಮಣಿರವರು ಪೊಲೀಸ ಠಾಣೆಯಲ್ಲಿ ತೀರ್ಮಾನದಂತೆ ರೂ.3,55,000/- ಹಣವನ್ನು ನೀಡಲು ಸಿದ್ಧರಿರುತ್ತಾರೆ ಎಂದು ತಿಳಿಸಿರುತ್ತಾರೆ. ನಿಂಗಣ್ಣರವರ ವಿರುದ್ಧ ರೂ.5 ಲಕ್ಷ ಮೊತ್ತದ ಚೆಕ್ಕು ಪ್ರಕರಣ ಹಾಗೂ ಬಸಮ್ಮಣಿರವರು ವಿರುದ್ಧ ರೂ.2,05,000/- ಮೊತ್ತದ ಚೆಕ್ ಪ್ರಕರಣ ದಾಖಲಾಗಿರುವ ವಿಚಾರ ಫೀರ್ಯಾದಿಯು ಸದರಿಯವರಿಗೆ ನೋಟಿಸ್ ನೀಡಿರುವುದರಿಂದ ನನಗೆ ತಿಳಿದಿರುತ್ತದೆ. ಸದರಿಯವರಿಗೆ ನೋಟಿಸ ನೀಡಿರುವ

ವಿಚಾರ ನಿಂಗಣ್ಣ ಮತ್ತು ಬಸಮ್ಮಣಿ ನನಗೆ ತಿಳಿಸಿರುತ್ತಾರೆ. ನಂತರ ನಾನು, ನಿಂಗಣ್ಣ ಮತ್ತು ಬಸಮ್ಮಣಿ ಮೂರು ಜನ ಸೇರಿ ಫೀರ್ಯಾದಿಗೆ ಪ್ರತ್ಯುತ್ತರ ನೋಟಿಸ ಜಾರಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಪ್ರತ್ಯುತ್ತರ ನೋಟಿಸನನ್ನು ಈ ಪ್ರಕರಣದಲ್ಲಿ ನನ್ನ ಪರವಾಗಿ ಹಾಜರಾಗುತ್ತಿರುವ ವಕೀಲರ ಮುಖಾಂತರ ಕಳುಹಿಸಿರುತ್ತೇನೆ. ಪ್ರತ್ಯುತ್ತರ ನೀಡಲು ವಕೀಲರಿಗೆ ಮಾಹಿತಿ ನಾನು ಹಾಗೂ ನಿಂಗಣ್ಣರವರು ನೀಡಿರುತ್ತೇವೆ.

ಬಸಮ್ಮಣಿರವರು ನನಗೆ ನಿಂಗಣ್ಣರವರ ಮುಖಾಂತರ ಪರಿಚಯ ಇರುತ್ತಾರೆ. ನಾನು ನಿಂಗಣ್ಣ ಹಾಗೂ ಬಸಮ್ಮಣಿರವರು ವಿಶ್ವಾಸದಲ್ಲಿ ಚೆನ್ನಾಗಿ ಇರುತ್ತೇವೆ ಎಂದರೆ ಸರಿ. ಸದರಿ ವಿಶ್ವಾಸದ ಕಾರಣದಿಂದ ನಾನು, ನಿಂಗಣ್ಣ ಹಾಗೂ ಬಸಮ್ಮಣಿರವರು ಹಣವನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಪ್ರತ್ಯುತ್ತರ ನೋಟಿಸ ನೀಡಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಕುಟುಂಬದ ಅವಶ್ಯಕತೆಗಾಗಿ ಹಾಗೂ ವೈಯುಕ್ತಿಕ ವ್ಯವಹಾರಕ್ಕಾಗಿ ಹಣದ ಅವಶ್ಯಕತೆ ಇರುವ ಸಮಯದಲ್ಲಿ ಬೇರಯವರಿಂದ ಹಣವನ್ನು ಸಾಲವಾಗಿ ಪಡೆಯುತ್ತೇನೆ ಎಂದರೆ ಸಾಕ್ಷಿಯು ನಾನು ಬೇರೆಯವರು ಹಣವನ್ನು ಸಾಲವಾಗಿ ಪಡೆಯುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಹಣದ ಅವಶ್ಯಕತೆ ಇದ್ದ ಕಾರಣ ನಾನು ದಿನಾಂಕ **08.06.2018** ರಲ್ಲಿ, ದಿ.**03.08.2020** ರಲ್ಲಿ ನನ್ನ ಆಸ್ತಿಯನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ನಾನು ಆರ್ಥಿಕವಾಗಿ ಸಬಲನಾಗಿದ್ದು, ನನಗೆ ಹಣದ ಅವಶ್ಯಕತೆ ಇರುವುದಿಲ್ಲ ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನಗೆ ಹಣದ ಅವಶ್ಯಕತೆ ಇದ್ದ ಕಾರಣ ನಾನು ದಿ.**27.09.2021** ರಂದು ರೂ.**5** ಲಕ್ಷ ಹಣವನ್ನು ಫೀರ್ಯಾದಿದಾರರುರಿಂದ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಹಣದ ಭದ್ರತೆಗಾಗಿ ಅದೇ ದಿನಾಂಕ **27.12.2021** ರ ಮುಂದಿನ ದಿನಾಂಕ ನಮೂದಿಸಿದ ನಿಪಿ-**1** ಚೆಕ್ಕನ್ನು ಫೀರ್ಯಾದಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಡೆದುಕೊಂಡ ಹಣವನ್ನು **3** ತಿಂಗಳ ಅವಧಿಯಲ್ಲಿ ಹಿಂದಿರುಗಿಸುವುದಾಗಿ ಭರವಸೆ ನೀಡಿದ್ದೆನು ಎಂದರೆ ಸರಿಯಲ್ಲ. ಅದರಂತೆ ಸದರಿ ಅವಧಿಯಲ್ಲಿ ಫೀರ್ಯಾದಿಯು ನನ್ನನ್ನು ಭೇಟಿ ಮಾಡಿ ಹಣ

ಮರುಪಾವತಿ ಮಾಡಲು ನನಗೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ನಿಪಿ-1 ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿ ಹಣ ಪಡೆದುಕೊಳ್ಳಲು ತಿಳಿಸಿದ್ದೆನುವು ಎಂದರೆ ಸರಿಯಲ್ಲ. ನಾನು ನೀಡಿದ ಭರವಸೆಯಂತೆ ಫೀರ್ಯಾದಿದಾರರು ನಿಪಿ-1 ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ನಿಪಿ-1 ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದ್ದಾಗ ನಿಪಿ-2 ರಂತೆ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ಹಿಂಬರಹ ನೀಡುತ್ತಾರೆ ಎಂದರೆ ಸರಿಯಲ್ಲ. ಹಿಂಬರಹ ಬಂದ ನಂತರ ಸಹ ಫೀರ್ಯಾದಿಯು ನನ್ನನ್ನು ಭೇಟಿ ಮಾಡಿ ಹಿಂಬರಹ ಬಂದಿರುವ ವಿಚಾರವನ್ನು ನನಗೆ ತಿಳಿಸಿದ್ದು, ಹಣವನ್ನು ಮರುಪಾವತಿಸಲು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿಯವರಿಗೆ ಹಣ ಮರುಪಾವತಿ ಮಾಡಿರುವುದಿಲ್ಲ ಎನ್ನುವ ಕಾರಣಕ್ಕೆ ಫೀರ್ಯಾದಿಯು ನನಗೆ ನಿಪಿ-3 ರಂತೆ ನೋಟಿಸ ಜಾರಿ ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ನೋಟಿಸ ಜಾರಿ ಮಾಡಿದ್ದರು ಎಂದು ನುಡಿಯುತ್ತಾರೆ. ಫೀರ್ಯಾದಿಯು ನೋಟಿಸ ಜಾರಿ ಮಾಡಿದ್ದರೂ ಸಹ ನಾನು ಸದರಿಯವರಿಗೆ ಹಣ ಮರುಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನೋಟಿಸ ಜಾರಿಯಾದ ನಂತರ ನಾನು ಫೀರ್ಯಾಧಿಗೆ ಹಣಮರುಪಾವತಿ ಮಾಡಲು ಕಾಲವಕಾಶ ಕೋರಿದ್ದೆನು ಎಂದರೆ ಸರಿಯಲ್ಲ. ಸದರಿ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಫೀರ್ಯಾಧಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಫೀರ್ಯಾದಿದಾರರು ಕಾಂಟ್ರಕ್ಟ ಕೆಲಸ ಮಾಡುತ್ತಾ ಹಾಗೂ ಇಟ್ಟಿಗೆ ಕೆಲಸ ಮಾಡುತ್ತಾ ಹಾಗೂ ಜಮೀನು ಇದ್ದು, ಸದರಿಯವರು ಆರ್ಥಿಕವಾಗಿ ಸಬಲರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಫೀರ್ಯಾದಿಯು ನಿಂಗಣ್ಣರವರೊಂದಿಗನ ವ್ಯವಹಾರದ ಬಾಬ್ತು ನನ್ನಿಂದ 2 ಚೆಕ್ಕುಗಳು, ನಿಂಗಣ್ಣರವರ 1 ಚೆಕ್ಕು ಹಾಗೂ ಬಸಮ್ಮಣಿರವರ 2 ಚೆಕ್ಕುಗಳನ್ನು ಪಡೆದುಕೊಂಡಿರುತ್ತಾರೆ ಎನ್ನುವ ವಿಚಾರ ಸುಳ್ಳು ಎಂದರೆ

ಸರಿಯಲ್ಲ. ಸದರಿ ಚೆಕ್ಕುಗಳನ್ನು ಪಡೆದುಕೊಂಡ ಪೊಲೀಸ ಠಾಣೆಯಲ್ಲಿ ತೀರ್ಮಾನವಾಗಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಫೀರ್ಯಾದಿಯು ನನ್ನ ವಿರುದ್ದ ಸಲ್ಲಿಸಿರುವ ಚೆಕ್ ಪ್ರಕರಣ, ನಿಂಗಣ್ಣರವರ ವಿರುದ್ಧ ಸಲ್ಲಿಸಿರುವ ಚೆಕ್ ಪ್ರಕರಣ ಹಾಗೂ ಬಸಮ್ಮಣಿರವರು ವಿರುದ್ಧ ಸಲ್ಲಿಸಿರುವ ಚೆಕ್ ಪ್ರಕರಣ ಎಲ್ಲವೂ ಬೇರೆ ಬೇರೆ ವ್ಯವಹಾರಕ್ಕೆ ಸಂಬಂಧಿಸಿರುತ್ತದೆ ಎಂದರೆ ಸರಿಯಲ್ಲ. ಫೀರ್ಯಾದಿದಾರರುರಿಂದ ನನ್ನ ಕಾನೂನುಬದ್ದ ಅವಶ್ಯಕತೆಗಾಗಿ ಪಡೆದುಕೊಂಡಿದ್ದ ಸಾಲವನ್ನು ಮರುಪಾವತಿಸಲು ನಾನು ಬದ್ಧನಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈಯುಕ್ತಿಕವಾಗಿ ಫೀರ್ಯಾದಿದಾರರ ವಿರುದ್ಧ ದೂರು ದಾಖಲು ಅಥವಾ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹಾಗೂ ನಿಡಿ-1 ರಲ್ಲಿ ತಿಳಿಸಿರುವ ವಿಚಾರಗಳು ಸುಳ್ಳು ಆಗಿರುತ್ತದೆ ಎಂದು ಮತ್ತು ಇಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಫೀರ್ಯಾಧಿದಾರರ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**